# ಐದು ವಸಂತಗಳ ಸುಂದರ ಸ್ವಪ್ನ



**'ಕ್ರೇಜಿ ಬಾಯ್' ಸಿನಿಮಾ ಮೂಲಕ 2016ರಲ್ಲಿ ಚಂದನವನಕ್ಕೆ ಅಡಿಯಿಟ್ಟವರು ಸಂಪಿಗೆ ಮೂಗಿನ ಚೆಲುವೆ ಆಶಿಕಾ ರಂಗನಾಥ್. 'ರ್‍ಯಾಂಬೊ 2' ಸಿನಿಮಾದ ಯಶಸ್ಸಿನ ನಂತರ ಅವರ ದೆಸೆಯೇ ಬದಲಾಗಿದೆ. ಅದು ಹೊರನೋಟದ ಬದಲಾವಣೆಯಷ್ಟೇ ಅಲ್ಲ, ಸಿನಿಮಾ ಕುರಿತ, ನಟನೆಯ ಕುರಿತು ಅವರ ಅಭಿಪ್ರಾಯವೂ ಅನುಭವದದ ಕುಲುಮೆಯಲ್ಲಿ ಹದಗೊಂಡಿದೆ.**

**■ ಪದ್ಮನಾಭ ಭಟ್**

**◆ ಈ ಐದು ವರ್ಷಗಳ ಸಿನಿಮಾ ಪ್ರಯಾಣ ಹೇಗಿತ್ತು?**

ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಗೆ ಪಾತ್ರಗಳ ವಿಷಯವ್ವೋ, ನಟನೆಯೋ, ತಾಂತ್ರಿಕ ವಿಭಾಗದಲ್ಲಿಯೋ ಏನೋ ಒಂದು ಹೊಸತನ್ನು ಕಲಿಯುತ್ತೇವೆ. ಸ್ವಲ್ಪವೂ ನಟನೆಯ ಅನುಭವ ಇಲ್ಲದೆ, ಸಿನಿಮಾ, ರಂಗಭೂಮಿಗಳ ಹಿನ್ನೆಲೆಯೂ ಇಲ್ಲದೆ ಸಿನಿಮಾ ಕ್ಷೇತ್ರಕ್ಕೆ ಬಂದವಳು ನಾನು. ಇದೊಂದು ಹೊಸ ಅನುಭವ ಎಂದು ಆರಂಭಿಸಿದ್ದು. ಆಗ ನನ್ನ ಶಿಕ್ಷಣವೂ ಮುಗಿದಿರಲಿಲ್ಲ. ಮುಂದೆ ಅದೇ ನನ್ನ ವೃತ್ತಿಯಾಗಿ ಬದಲಾಗಿಬಿಟ್ಟಿತು. ಈಗ ನಾನು ಚಿತ್ರರಂಗಕ್ಕೆ ಬಂದು ಐದು ವರ್ಷಗಳು ಮುಗಿದಿವೆ. ಸುಮಾರು ಹತ್ತು ಸಿನಿಮಾಗಳಲ್ಲಿ ನಟಿಸಿದ್ದೇನೆ. ಒಂದು ತಮಿಳು, ಒಂದು ತೆಲುಗು ಸಿನಿಮಾದಲ್ಲಿಯೂ ನಟಿಸುತ್ತಿದ್ದೇನೆ.

ನಿಜಕ್ಕೂ ಇದು ವಿಭಿನ್ನ ಅನುಭವ ಕೊಟ್ಟಿದೆ. ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದರ ಬಗ್ಗೆ ನನಗೆ ತುಂಬ ಖುಷಿಯಿದೆ. ಇದರ ಬದಲು ಬೇರೆ ಯಾವ ಕೆಲಸ ಆಯ್ಕೆ ಮಾಡಿಕೊಂಡಿದ್ದರೂ ನನಗೆ ಇಷ್ಟೊಂದು ಖುಷಿ ಸಿಗುತ್ತಿರಲಿಲ್ಲವೇನೋ.

**◆ ಇಷ್ಟು ವರ್ಷಗಳ ಅನುಭವದ ನಂತರ, ನೀವು ಸಿನಿಮಾ ಆಯ್ಕೆ ಮಾಡಿಕೊಳ್ಳುವ ರೀತಿ ಈಗ ಬದಲಾಗಿದೆಯೇ?**

ಇಲ್ಲಿಯವರೆಗೂ ಒಂದು ಒಳ್ಳೆಯ ಡೈರೆಕ್ಟರ್ ಸಿನಿಮಾ ಸಿಕ್ಕರೆ, ಒಳ್ಳೆಯ ನಿರ್ಮಾಣಸಂಸ್ಥೆಯ ಸಿನಿಮಾವಾದರೆ, ಒಳ್ಳೆಯ ನಾಯಕನಟನ ಸಿನಿಮಾ ಆದರೆ ಒಪ್ಪಿಕೊಂಡುಬಿಡುತ್ತಿದ್ದೆ. ಆದರೆ ಈಗ, 'ರ್‍ಯಾಂಬೊ 2' ಸಿನಿಮಾದ ಯಶಸ್ಸಿನ ನಂತರ, ಜನರು ನನ್ನನ್ನು ಬೇರೆ ಬೇರೆ ರೀತಿಯ ಪಾತ್ರಗಳಲ್ಲಿ ನೋಡಲು ಇಷ್ಟಪಡುತ್ತಾರೆ ಎಂದು ತಿಳಿಯುತ್ತಾ ಬಂದಿದೆ. ಒಳ್ಳೆಯ ಹಾಡುಗಳನ್ನು ನನ್ನಿಂದ ನಿರೀಕ್ಷೆ ಮಾಡುತ್ತಾರೆ ಎಂದು ಗೊತ್ತಾಗಿದೆ. ಹೀಗೆ ಸಿನಿಮಾ ಕುರಿತ ನನ್ನ ಅನುಭವ ಹೆಚ್ಚಿದಂತೆಲ್ಲ ಆಯ್ಕೆಯ ಮಾನದಂಡಗಳೂ ಬದಲಾಗುತ್ತ ಬಂದಿವೆ.

ಕಥೆ ಎಷ್ಟೇ ಚೆನ್ನಾಗಿದ್ದರೂ, ಅದನ್ನು ಕಾರ್ಯಗತಗೊಳಿಸಲು ಒಳ್ಳೆಯ ತಂಡ ಇಲ್ಲ ಎಂದರೆ ಸಿನಿಮಾ ಯಶಸ್ಸು ಗಳಿಸುವುದಿಲ್ಲ. ಹಾಗಾಗಿ ನಾನು ಒಳ್ಳೆಯ ತಂಡವನ್ನು ನಂಬುತ್ತೇನೆ. ನಿರ್ದೇಶಕ, ಸಿನಿಮಾಟೋಗ್ರಾಫರ್, ಮ್ಯೂಸಿಕ್ ಡೈರೆಕ್ಟರ್, ನಾಯಕ – ಹೀಗೆ ಇಡೀ ತಂಡ ನನಗೆ ತುಂಬ ಮುಖ್ಯ ಅನಿಸುತ್ತದೆ. ಅವೆಲ್ಲವನ್ನೂ ನೋಡಿ ಸಿನಿಮಾ ಒಪ್ಪಿಕೊಳ್ಳುತ್ತೇನೆ. ನನ್ನ ಪಾತ್ರಕ್ಕೂ ಅಷ್ಟೇ ಮಹತ್ವ ಇರಬೇಕು. ಯಾಕೆಂದರೆ ಜನರೂ ಸಿನಿಮಾವನ್ನು ನೋಡುವಲ್ಲಿ ತುಂಬ ಚ್ಯೂಸಿಯಾಗಿದ್ದಾರೆ.

**◆ ಈಗ ಚಿತ್ರರಂಗ ಮತ್ತೆ ಸಕ್ರಿಯಗೊಳ್ಳುತ್ತಿದೆ. ಮುಂದಿನ ಒಂದು ವರ್ಷದಲ್ಲಿ ನೀವು**